Indian Journal of History and Archaeology

ISSN (E):2582-225X
Vol-1 Issue 2, September-October, 2019, 73-77

# ಹದಿನಾರು ಗ್ರಾಮದ ಸ್ಮಾರಕ ಶಿಲ್ಪಗಳು

**ಅರುಣಕುಮಾರ, ಹೆಚ್.ಆರ್.**

**ಅರುಣಕುಮಾರ, ಹೆಚ್.ಆರ್.**
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಹದಿನಾರು ಗ್ರಾಮವು ನಂಜನಗೂಡು ತಾಲೂಕಿಗೆ ಸೇರಿರುವ ಒಂದು ಊರು. ಇದು ನಂಜನಗೂಡಿನಿಂದ ಈಶಾನ್ಯಕ್ಕೆ ಸು. 12ಕಿ.ಮೀ. ದೂರದಲ್ಲಿ ಕಂಡು ಬರುತ್ತದೆ. ಮತ್ತು ಮೈಸೂರಿನಿಂದ ಆಗ್ನೇಯಕ್ಕೆ 24 ಕಿ.ಮೀ. ದೂರದಲ್ಲಿದೆ. ಹಾಗೂ ತಿರುಮಕೂಡಲು ನರಸೀಪುರದಿಂದ ಪಶ್ಚಿಮಕ್ಕೆ 18 ಕಿ.ಮೀ. ದೂರವಾಗಿದೆ. ಅಲ್ಲದೆ ಸುತ್ತೂರಿನಿಂದ 8 ಕಿ.ಮೀ. ದೂರದಲ್ಲಿದೆ. ಈ ಸ್ಥಳವನ್ನು ಪ್ರಾಚೀನ ಕಾಲದಲ್ಲಿ "ಹದಿನಾಡು", "ಯದುನಾಡು", "ಹದಿನಾಡಿ", "ಹದಿನಾರು" ಎಂಬ ಹಲವು ಹೆಸರುಗಳಿಂದ ಕರೆಯಲ್ಪಟ್ಟಿದೆ.

ಕ್ರಿ.ಶ.16–17ನೇ ಶತಮಾನದಲ್ಲಿ ಮೈಸೂರು ಜಿಲ್ಲೆಯ ಹದಿನಾಡು ಪ್ರಾಂತ್ಯವನ್ನಾಳಿದ ಒಂದು ಮಾಂಡಲೀಕ ಮನೆತನವೇ ಈ ಹದಿನಾಡನ್ನಾಳಿದ ಪಾಳೇಗಾರರು. ಇದಕ್ಕೂ ಮೊದಲು ಈ ಗ್ರಾಮವನ್ನು ಗಂಗ, ಚೋಳರ ಶಾಸನಗಳಲ್ಲಿ "ಅದಿರಾರು" ಎಂದು ಕರೆಯಲಾಗಿದ್ದರೆ, ಹೊಯ್ಸಳ ಹಾಗೂ ವಿಜಯನಗರ ಕಾಲದ ಶಾಸನಗಳಲ್ಲಿ "ಹದಿನಾಡೆಂದು" ಉಲ್ಲೇಖಿತವಾಗಿದೆ. ಹದಿನಾಡು ಅಥವಾ ಹತ್ತುನಾಡು ಎಂದು ಪರಿಗಣಿಸಲ್ಪಟ್ಟಿರುವ ಈ ಹದಿನಾರು ಗ್ರಾಮವು ಬಹುಶಃ ಪ್ರಾಚೀನ ಕಾಲದ ಪುನ್ನಾಡು–1000 ಎಂಬ ಒಂದು ಹೇಳಿಕೆ ಇದೆ. ಯಳಂದೂರು ಇದರ ಮುಖ್ಯ ಪಟ್ಟಣವಾಗಿದ್ದು ಸು.900ರ ವೇಳೆಗೆ ಚೋಳರ ಮುತ್ತರಸ ಎಂಬುವನನ್ನು ಕೊಂದು ತಮ್ಮ ಹಸಿವನ್ನು ನೀಗಿಸಿದರೆಂದು ಹೇಳಲಾದ ಯರೆಯಂಗ ಪುಲಪೋಚ ಮತ್ತು ಚೋಳ ಮುತ್ತರಸನ ಇಬ್ಬರು ಮಕ್ಕಳಿಗೆ ಈ ಹದಿನಾರು 12 ಪ್ರಾಂತ್ಯ ಕಲ್ನಾಡಾಗಿ ಕೊಡಲ್ಪಟ್ಟಿತೆಂದು ಒಂದು ಶಾಸನದಿಂದ ತಿಳಿದು ಬರುತ್ತದೆ. ಹೊಯ್ಸಳರ ಆಳ್ವಿಕೆ ಕಾಲದಲ್ಲಿ "ಹದಿನಾಡು ಮೆಂಟಿ" ಎಂದು ಕರೆಯಲ್ಪಟ್ಟಿದ್ದ ಇದು ದಕ್ಷಿಣ ವಾರಣಾಸಿ ಎನ್ನಿಸಿಕೊಂಡಿತ್ತು. ವಿಜಯನಗರ ಅರಸರ ಸಾರ್ವಭೌಮತ್ವವನ್ನು ಇವರು

ಒಪ್ಪಿಕೊಂಡಿದ್ದರು. ಕೊನೆ ಕೊನೆಗೆ ಆಳಿದ ಈ ವಂಶದ ನಾಯಕರು ವಿಜಯನಗರದ ಕೊನೆಯ ಅರಸರ ಹೆಸರುಗಳ ಅನುಕರಣೆ ಮಾಡಿದ್ದು ಅವರ ಹೆಸರುಗಳಿಂದ ತಿಳಿದು ಬರುತ್ತದೆ. ಹೀಗೆ ಹದಿನಾರು ಗ್ರಾಮವು ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ತನ್ನದೇ ಆದ ಸಾಂಸ್ಕೃತಿಕ ಮಹತ್ವವನ್ನು ಹೊಂದಿದ್ದು ಅದಕ್ಕೆ ಸಂಬಂಧಿಸಿದಂತೆ ಇಂದಿಗೂ ಈ ಗ್ರಾಮದಲ್ಲಿ ಜೀವಂತವಾಗಿ ಉಳಿದಿರುವ ದೇವಾಲಯಗಳು, ವೀರಗಲ್ಲುಗಳು ಮತ್ತು ಬಿಡಿಶಿಲ್ಪಗಳೇ ಇದಕ್ಕೆ ಸಾಕ್ಷಿಯಾಗಿವೆದೀ ಹಿನ್ನೆಲೆಯಲ್ಲಿ ಸಂಶೋಧನಾ ಕಾರ್ಯದ ನಿಮಿತ್ತ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಈ ಗ್ರಾಮದಲ್ಲಿ ನನಗೆ ಕೆಲವು ಬಿಡಿಶಿಲ್ಪಗಳು ಗೋಚರಿಸಿದವು. ಹೀಗಾಗಿ ಇವುಗಳನ್ನು ಅಧ್ಯಯನಕ್ಕೊಳಪಡಿಸಿ ಸಿದ್ಧಪಡಿಸಿದ ಲೇಖನ ಇದಾಗಿದ್ದು ಈ ಕೆಳಕಂಡಂತೆ ವಿವರಿಸಿದ್ದೇನೆ.

1. **ಕುದುರೆಯ ಮೇಲೆ ಕುಳಿತ ರಾಜ:** ಈ ಶಿಲ್ಪವು ಗ್ರಾಮದ ರಾವಳೇಶ್ವರ ದೇವಾಲಯದ ಮುಂದೆ ಎಡಭಾಗದಲ್ಲಿ ನಿಲ್ಲಿಸಲಾಗಿದ್ದು ಇದು ಮೂರು ಅಡಿ ಎತ್ತರ, 3 ಅಡಿ ಅಗಲ ಮತ್ತು 5 ಇಂಚು ದಪ್ಪವಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಈ ಶಿಲ್ಪದಲ್ಲಿ ಪತಿ ಪತ್ನಿಯರು ಇಬ್ಬರು ಕುದುರೆಯ ಮೇಲೆ ಕುಳಿತು ಯುದ್ಧಕ್ಕೆ ಸನ್ನದ್ಧರಾಇ ಕೈಗಳಲ್ಲಿ ಆಯುಧೋಪಕರಣಗಳನ್ನು ಹಿಡಿದು ಹೊರಟಿರುವಂತೆ ಕಂಡರಿಸಲಾಗಿದ್ದು ಹಾಗೂ ಈ ದಂಪತಿಗಳು ವಸ್ತ್ರಧಾರಿಯರಾಗಿದ್ದು ಮೈಮೇಲೆ ವಿವಿಧ ರೀತಿಯ ಅಲಂಕಾರಿಕ ಆಭರಣಗಳನ್ನು ಧರಿಸಿದ್ದು ಕುದುರೆಯು ಸಹ ದಷ್ಟಪುಷ್ಟವಾಗಿ ಅಲಂಕರಣದೊಂದಿಗೆ ಈ ಕುದುರೆಯ ಮುಂಭಾಗದಲ್ಲಿ ಒಬ್ಬ ಸೈನಿಕನು ಯುದ್ಧದಲ್ಲಿ ಹೋರಾಡುವಂತೆ ಹಾಗೂ ಹಿಂಭಾಗದಲ್ಲಿ ಸೇವಕನು ರಾಜನ ಶಿರದ ಮೇಲೆ ಉದ್ದನೆಯ ಛತ್ರಿ ಹಿಡಿದಿರುವಂತೆ ಚಿತ್ರದಲ್ಲಿ ಕಂಡರಿಸಲಾಗಿದೆ.

2. **ಕುದುರೆಯ ಮೇಲೆ ಕುಳಿತ ರಾಜ:** ಈ ಶಿಲ್ಪವು ಸು. 2.5 ಅಡಿ ಎತ್ರ, 1.5 ಅಡಿ ಅಗಲ ಮತ್ತು 5 ಇಂಚು ದಪ್ಪನಾದ ಬಳಪದ ಕಲ್ಲಿನದಾಗಿದ್ದು ಒಂದು ಹಂತದಿಂದ ಕೂಡಿದೆ. ರಾಜನು ಈ ಶಿಲ್ಪದಲ್ಲಿ ಕುದುರೆಯನ್ನೇರಿ ಕುಳಿತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆತ್ತಿ ಯುದ್ಧಕ್ಕೆ ಸನ್ನದ್ಧನಾಗಿ ಹೊರಟಂತೆ ಚಿತ್ರದಲ್ಲಿ ಕಂಡರಿಸಲಾಗಿದೆ.

3. **ಕುದುರೆಯ ಮೇಲೆ ಕುಳಿತ ರಾಜ:**ಈ ಶಿಲ್ಪವನ್ನು ಸು. ಮೂರು ಅಡಿ ಎತ್ತರ, ಮೂರು ಅಡಿ ಅಗಲವಿರುವ ಒಳಪದ ಕಲ್ಲಿನಲ್ಲಿ ಪತಿ ಪತ್ನಿಯರಿಬ್ಬರು ಕುದುರೆಯನ್ನೇರಿ ಹೊರಟಿರುವಂತೆ ರಚಿಸಲಾಗಿದೆ. ಕುದುರೆ ಮತ್ತು ದಂಪತಿಗಳಿಬ್ಬರ ಮೈಮೇಲೆ ಬಿಡಿಸಲಾಗಿರುವ ವಸ್ತ್ರಗಳು ಸುಂದರವಾಗಿವೆ. ಪುರುಷನು ಎಡಗೈಯಲ್ಲಿ ಲಗಾಮು ಹಿಡಿದುಕೊಂಡು ಬಲಗೈಯಲ್ಲಿ ಕತ್ತಿ ಹಿಡಿದು ಮೇಲಕ್ಕೆ ಎತ್ತಿದ್ದಾನೆ. ಈ ಕುದುರೆ ಸವಾರನ ಮುಂದೆ ಒಬ್ಬ ಸೇವಕ ನಿಂತಿದ್ದಾನೆ. ಹಿಂಭಾಗದಲ್ಲಿರುವ ಸೇವಕನನ್ನು ರಾಜ ಛತ್ರಿಯನ್ನು ಹಿಡಿದು ಕುದುರೆ ಸವಾರನ ಶಿರದ ಮೇಲೆ ಎತ್ತಿ ಹಿಡಿದಿದ್ದಾನೆ.

4. **ಕುದುರೆಯ ಮೇಲೆ ಕುಳಿತ ರಾಜ**:ಬಳಪದ ಕಲ್ಲಿನಲ್ಲಿ ರಚಿಸಲಾಗಿರುವ ಈ ಕುದುರೆ ಸವಾರನ ಶಿಲ್ಪವು ಮೂರು ಅಡಿಗಳ ಎತ್ತರ, ಮೂರು ಅಡಿಗಳ ಅಗಲವಾಗಿದೆ. ಇದರ ಒಳಗೆ ಪತಿ ಪತ್ನಿಯರಿಬ್ಬರೂ ಕುದುರೆಯನ್ನೇರಿ ಹೊರಟಿದ್ದಾರೆ. ಕುದುರೆಯ ಮೇಲೆ ಹಾಕಲಾಗಿರುವ ಜೀನು ಮತ್ತು ದಂಪತಿಗಳು ಧರಿಸಿರುವ ವಸ್ತ್ರಗಳು ಸುಂದರವಾಗಿವೆ. ಪುರುಷನು ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದು ಬಲಗೈಯಲ್ಲಿರುವ ಕತ್ತಿಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಕುದುರೆಯ ಹಿಂಭಾಗದಲ್ಲಿರುವ ಸೇವಕನು ಛತ್ರಿಯನ್ನು ಹಿಡಿದು ದಂಪತಿಗಳ ಶಿರದ ಮೇಲೆ ಬರುವಂತೆ ಹಿಡಿದಿದ್ದಾನೆ. ಛತ್ರಿಯ ಹಿಂದೆ ಮತ್ತೋರ್ವ ಸೇವಕನು ನಿಂತುಕೊಂಡಿದ್ದಾನೆ.

5. **ಸ್ಮಾರಕ ಶಿಲ್ಪ**: ಬಳಪದ ಕಲ್ಲಿನಲ್ಲಿ ರಚಿಸಲಾಗಿರುವ ಈ ಶಿಲ್ಪವು ಸು. ಮೂರು ಅಡಿ ಎತ್ತರವಾಗಿ ಸಮಭಂಗಿಯಲ್ಲಿ ನಿಂತಿರುವ ವೀರನ ಶಿಲ್ಪವಿದೆ. ಇವನು ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಇಳಿಬಿಟ್ಟಿರುವಂತೆ ನಿಂತಿದ್ದು ಇವನ ಎಡಭಾಗದಲ್ಲಿರುವ ಪುರುಷನು ಬುತ್ತಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಹೆಗಲಿಗೆ ಹಾಕಿಕೊಂಡಿದ್ದಾನೆ.

6. **ಸ್ಮಾರಕ ಶಿಲ್ಪ**: ಬಳಪದ ಕಲ್ಲಿನಲ್ಲಿ ಸು. ಮೂರು ಅಡಿ ಎತ್ತರವಿರುವ ವೀರಪುರುಷನ ಶಿಲ್ಪವನ್ನು ರಚಿಸಲಾಗಿದೆ. ಈ ವೀರನು ಸಮಭಂಗಿಯಲ್ಲಿ ನಿಂತಿದ್ದಾನೆ. ಬಲಗೈಯಲ್ಲಿ ಕತ್ತಿ ಹಿಡಿದು ಮೇಲಕ್ಕೆ ಎತ್ತಿದ್ದಾನೆ. ಎಡಗೈಯಲ್ಲಿ ಯಾವುದೋ ವಸ್ತು ಹಿಡಿದಿದ್ದಾನೆ, ಅದು ಸ್ಪಷ್ಟವಾಗಿ ಕಾಣುವುದಿಲ್ಲ. ತಲೆಯ ಕೂದಲನ್ನು ತುರುಬಿನಂತೆ ಮೇಲಕ್ಕೆ ಸಿಂಬೆಯಂತೆ ಕಟ್ಟಿದ್ದಾನೆ. ಮೈಮೇಲೆ ಬಿಡಿಸಲಾಗಿರುವ ಹಾರವಿದೆ. ತೋಳಿಗೆ, ಮುಂಗೈಗಳಿಗೂ ಮಣಿಹಾರ ಹಾಕಿಕೊಂಡಿದ್ದಾನೆ.

7. **ಸ್ಮಾರಕ ಶಿಲ್ಪ**: ಬಳಪದ ಕಲ್ಲಿನಲ್ಲಿ ರಚಿಸಲಾಗಿರುವ ಈ ಶಿಲ್ಪವು ಮೂರು ಅಡಿ ಎತ್ತರವಾಗಿದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಯಾವುದೋ ದೇವಿ ಇದ್ದಂತೆ ಕಂಡು ಬರುತ್ತದೆ. ಈ ದೇವಿಯು ಬಲಗೈಯಲ್ಲಿ ಕತ್ತಿಯನ್ನು ಹಿಡಿದುಕೊಂಡಿದ್ದಾಳೆ, ಎಡಗೈಯಲ್ಲಿ ಪುರುಷನ ತಲೆಯ ಜುಟ್ಟನ್ನು ಹಿಡಿದುಕೊಂಡಿದ್ದಾಳೆ, ಮೈಮೇಲೆ ಧರಿಸಲಾಗಿರುವ ವಸ್ತ್ರಗಳು ಸರಳವಾಗಿವೆ. ಈ ಶಿಲ್ಪವಿರುವ ಕಲ್ಲಿನ ಸುತ್ತಲೂ ಹೂವಿನ ಹಾರದ ರೀತಿ ಅಲಂಕರಿಸಲಾಗಿದೆ.

8. **ಕುದುರೆಯ ಮೇಲೆ ಕುಳಿತ ರಾಜ**: ಈ ಶಿಲ್ಪವನ್ನು ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲವಿರುವ ಬಳಪದ ಕಲ್ಲಿನದ್ದಾಗಿದ್ದು ಪತಿಪತ್ನಿಯರಿಬ್ಬರೂ ಕುದುರೆಯನ್ನೇರಿ ಪಶ್ಚಿಮ ದಿಕ್ಕಿಗೆ ಹೊರಟಂತೆ ರಚಿಸಲಾಗಿದೆ. ಕುದುರೆಗೆ ಹಾಕಿರುವ ಜೀನು ಲಗಾಮು ಕೊರಳ ಗಂಟೆ ಹಾರಗಳು ಸುಂದರವಾಗಿವೆ. ಕುದುರೆಯ ಮೇಲೆ ಕುಳಿತಿರುವ ಪುರುಷನು ಎಡಗೈಯಲ್ಲಿ ಕುದುರೆ ಲಗಾಮು ಹಿಡಿದು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದು ಕುದುರೆಯ ಹಿಂದಿರುವ ಸೇವಕನು ರಾಜಛತ್ರಿ ಹಿಡಿದು ಸವಾರನ ಶಿರದ ಮೇಲೆ ಬರುವಂತೆ ಹಿಡಿದಿದ್ದಾನೆ.

ಇವನ ಪಕ್ಕದಲ್ಲಿ ಮತ್ತೋರ್ವ ಸೇವಕ ನಿಂತಿದ್ದಾನೆ. ಹಾಗೂ ಕುದುರೆಯ ಶಿರದ ಮೇಲೆ ನಿಂತಿರುವ ಪುರುಷನು ರಾಜನಲ್ಲಿ ಏನೋ ಬೇಡುವಂತಿದೆ. ಈ ಪುರುಷನ ಹೆಗಲ ಮೇಲೆ ಬುತ್ತಿ ಕಟ್ಟಿಕೊಂಡಿರುವಂತೆ ಕಾಣುತ್ತದೆ. ಈ ಕಲ್ಲಿನ ಸುತ್ತಲೂ ಮಣಿಗಳ ಹಾರ ಬಿಡಿಸಲಾಗಿದೆ.

೯. **ಭೈರವ ಶಿಲ್ಪ**: ಈ ಶಿಲ್ಪವನ್ನು ಬಳಪದ ಕಲ್ಲಿನಲ್ಲಿ ರಚಿಸಲಾಗಿದೆ. ಈ ದೇವನು ಆನೆಯ ಮೇಲೆ ಪಾದರಕ್ಷೆಗಳನ್ನು ಹಾಕಿಕೊಂಡು ನಿಂತಿದ್ದಾನೆ. ಸಮಭಂಗಿಯಲ್ಲಿ ನಿಂತಿರುವ ಈ ದೇವನು ಚತುರ್ಭುಜವನ್ನು ಹೊಂದಿದ್ದು ಕೈಗಳಲ್ಲಿ ಕತ್ತಿ, ರುಂಡ, ತ್ರಿಶೂಲ, ಡಮರು ಹಿಡಿದುಕೊಂಡಿದ್ದಾನೆ. ಈ ದೇವನ ಬಲಭಾಗದಲ್ಲಿ ಮಹಿಳೆಯೋರ್ವಳು ನಿಂತಿದ್ದಾಳೆ. ಎಡಭಾಗದಲ್ಲಿ ಕುದುರೆ ನಿಂತಿದೆ. ಈ ದೇವನ ಮೈಮೇಲೆ ಬಿಡಿಸಲಾಗಿರುವ ವಸ್ತ್ರಾಭರಣ ಸುಂದರವಾಗಿ ಮೂಡಿ ಬಂದಿವೆ. ಪ್ರಭಾವಳಿಯಲ್ಲಿ ಪದ್ಮದಳಗಳ ಮಣಿಹಾರಗಳನ್ನು ಬಿಡಿಸಲಾಗಿದೆ.

೧೦. **ಶಿವ**: ಈ ಶಿಲ್ಪವನ್ನು ಬಳಪದ ಕಲ್ಲಿನಲ್ಲಿ ರಚಿಸಲಾಗಿರುವ ಶಿವನು ಮೂರು ಅಡಿ ಎತ್ತರವಾಗಿ ಸಮಭಂಗಿಯಲ್ಲಿ ನಿಂತಿದ್ದಾನೆ. ಚತುರ್ಭುಜವನ್ನು ಹೊಂದಿರುವ ಈ ದೇವನು ಕೈಗಳಲ್ಲಿ ಕತ್ತಿ, ಪಾತ್ರೆ, ಡಮರು, ತ್ರಿಶೂಲ ಹಿಡಿದುಕೊಂಡಿದ್ದಾನೆ. ಈ ಶಿಲ್ಪದ ಸುತ್ತಲೂ ಪದ್ಮ ದಳಗಳ ಅಲಂಕರಣದ ಪ್ರಭಾವಳಿಯನ್ನು ನಿರ್ಮಿಸಲಾಗಿದೆ.

ಒಟ್ಟಾರೆ ಈ ಮೇಲೆ ತಿಳಿಸಿರುವ ಎಲ್ಲಾ ಶಿಲ್ಪಗ ವಿವರಣೆಯನ್ನು ಗಮನಿಸಿದಾಗ ಸಾಮಾಜಿಕ ಪ್ರಕ್ರಿಯೆಯಲ್ಲಿ ಎಲ್ಲರೂ ಯುದ್ಧದಲ್ಲಿ ಭಾಗಿಗಳಾಗಿ ಸಾಮ್ರಾಜ್ಯದ ಒಳಿತಿಗಾಗಿ ಶ್ರಮವಹಿಸಿ ತಮ್ಮ ಪ್ರಾಂತ್ಯಗಳನ್ನು ರಕ್ಷಿಸಿಕೊಳ್ಳುವಲ್ಲಿ ನಿರತರಾಗಿದ್ದು ಧಾರ್ಮಿಕ ಪರಂಪರೆಯನ್ನು ಸಾರುವಲ್ಲಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

**ಛಾಯಾಚಿತ್ರಗಳು**





**ಪರಾಮರ್ಶನ ಗ್ರಂಥಗಳು:**

1. ಹಾ.ಮಾ.ನಾಯಕ–ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈ.ವಿ.ವಿ., ಮೈಸೂರು, 1979
2. ಅಪರ್ಣ, ಕೂ.ಸ.–ದೇವಾಲಯ ವಾಸ್ತುಶಿಲ್ಪ ಪರಿಚಯ, ಹಂಪಿ, 1999
3. ಶ್ರೀಕಂಠಶಾಸ್ತ್ರಿ, ಎಸ್.–ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈ.ವಿ.ವಿ., ಮೈಸೂರು, 1965
4. ತಿಪ್ಪೇರುದ್ರಸ್ವಾಮಿ, ಹೆಚ್.–ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, 1985
5. Ramachandra Rao, S.K.-Indian Temple Traditions, New Delhi, 2016
6. ಪರಮಶಿವಮೂರ್ತಿ, ಡಿ.ವಿ.–ಕನ್ನಡ ಶಾಸನ ಶಿಲ್ಪ, ಹಂಪಿ, 1999
7. ಜ್ಞಾನಾನಂದ, ಜಿ.–ಶಿಲ್ಪಾದರ್ಶ, ಸಂಪುಟ 1 & 2, ಹಂಪಿ, 2002